ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ

ದಿನಾಂಕ : DATE : 22/01/2020

# ಸ್ಪೀಕರ್ ಅಧಿಕಾರಕ್ಕೆ ಕೊಕ್ಕೆ?

- ಸ್ಪೀಕರ್ ಹೊಂದಿರುವ ಕಾನೂನು ಪರಾಮರ್ಶಿಸಿ ಸಂಸತ್ ಕಾನೂನು ರೂಪಿಸಲಿ
- ಕರ್ನಾಟಕದ ಶಾಸಕರ ರಾಜೀನಾಮೆ ವಿಚಾರ ಪ್ರಸ್ತಾಪಿಸಿದ ನ್ಯಾಯಪೀಠ

**ನವದೆಹಲಿ:** ಶಾಸಕ ಅಥವಾ ಸಂಸದರ ಅನರ್ಹತೆ ವಿಚಾರದಲ್ಲಿ ಸ್ಪೀಕರ್ ಮೂರು ತಿಂಗಳುಗಳಲ್ಲಿ ನಿರ್ಧಾರ ತೆಗೆದುಕೊಳ್ಳಬೇಕು... ಅನರ್ಹತೆ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಸ್ವತಂತ್ರ ಸಮಿತಿಗೆ ನೀಡಬೇಕು...

ಇದು ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯ. ಮಣಿಪುರ ವಿಧಾನಸಭೆಯ ಇಬ್ಬರು ಶಾಸಕರ ಅನರ್ಹತೆ ಪ್ರಕರಣ ಸಂಬಂಧ ವಿಚಾರಣೆ ನಡೆಸಿದ ನ್ಯಾ. ರೋಹಿಂಗ್ಟನ್ ಎಫ್. ನಾರಿಮನ್, ನ್ಯಾ. ಅನಿರುದ್ಧ ಬೋಸ್, ನ್ಯಾ. ವಿ.ರಾಮಸುಬ್ರಮಣಿಯನ್ ನೇತೃತ್ವದ ತ್ರಿಸದಸ್ಯ ಪೀಠ ಸ್ಪೀಕರ್ ಕಾರ್ಯವ್ಯಾಪ್ತಿ ಬಗ್ಗೆ ಕೆಲವೊಂದು ಆಕ್ಷೇಪಗಳನ್ನೂ ಎತ್ತಿದೆ.

ಲೋಕಸಭೆ ಅಥವಾ ವಿಧಾನಸಭೆಯ ಆಯುಸ್ಸು ಇರುವುದೇ ಐದು ವರ್ಷ. ಇಂಥ ಸನ್ನಿವೇಶದಲ್ಲಿ ಅನರ್ಹತೆ ಅರ್ಜಿ ಬಂದ ಕೂಡಲೇ ಒಂದು ಕಾಲಮಿತಿ ನಿಗದಿ ಮಾಡಿಕೊಂಡು ಅರ್ಜಿ ಇತ್ಯರ್ಥ ಮಾಡಬೇಕು. ▶ 10ನೇ ಪುಟಕ್ಕೆ

# ಸ್ಪೀಕರ್ ಅಧಿಕಾರಕ್ಕೆ ಕೊಕ್ಕೆ?

**1ನೇ ಪುಟದಿಂದ** ▶ ಒಂದು ವೇಳೆ ಪಕ್ಷಾಂತರ ನಿಷೇಧ ಕಾಯ್ದೆಯಡಿ ಶಾಸಕ ಅಥವಾ ಸಂಸದ ತಪ್ಪು ಮಾಡಿದ್ದಾನೆ ಎಂದಾದರೆ, ಅವರು ವಿಧಾನಸಭೆ ಅಥವಾ ಲೋಕಸಭೆಯಲ್ಲಿ ಒಂದು ದಿನವೂ ಇರಲು ಯೋಗ್ಯರಲ್ಲ ಎಂದೂ ಹೇಳಿದೆ.

**ಸ್ವತಂತ್ರ ಸಮಿತಿ ನೇಮಕ ಸೂಕ್ತ:** ಕರ್ನಾಟಕ ವಿಧಾನಸಭೆ ಸೇರಿದಂತೆ ದೇಶದ ವಿವಿಧ ವಿಧಾನಸಭೆಗಳ ಪ್ರಕರಣಗಳನ್ನು ಉದಾಹರಣೆಯಾಗಿ ನೀಡಿದ ಸುಪ್ರೀಂಕೋರ್ಟ್, ಅನರ್ಹತೆ ವಿಚಾರದಲ್ಲಿ ನಿರ್ಧಾರ ತೆಗೆದುಕೊಳ್ಳಲು ಶೆಡ್ಯೂಲ್ 10ರಡಿಯಲ್ಲಿ ಸುಪ್ರೀಂನ ನಿವೃತ್ತ ನ್ಯಾಯಮೂರ್ತಿ ಅಥವಾ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಒಂದು ಸ್ವತಂತ್ರ ಸಮಿತಿ ನೇಮಕ ಮಾಡುವುದು ಸೂಕ್ತ ಎಂದು ಪೀಠ ಹೇಳಿತು. ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಸಂಸತ್ ಮುಂದಾಗಬೇಕು ಎಂದೂ ತಿಳಿಸಿತು. ಜತೆಗೆ ಸ್ಪೀಕರ್ ಅವರು ಅರೆ ನ್ಯಾಯಿಕ ಹುದ್ದೆ ಹೊಂದಿದ್ದರೂ, ಅನರ್ಹತೆ ವಿಚಾರದಲ್ಲಿ ಪಕ್ಷವೊಂದರ ಪರವಾಗಿ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆ ಇರುತ್ತದೆ. ಹೀಗಾಗಿ, ಇಂಥ ನಿರ್ಧಾರಗಳನ್ನು ಸ್ವತಂತ್ರ ಸಮಿತಿಯೇ ಪಕ್ಷಪಾತರಹಿತವಾಗಿ ತೆಗೆದುಕೊಳ್ಳಬೇಕು ಎಂದಿತು.

**ನಾಲ್ಕು ವಾರದಲ್ಲಿ ಕ್ರಮ ತೆಗೆದುಕೊಳ್ಳಿ:** ಅನರ್ಹತೆ ವಿಚಾರಕ್ಕೆ ಸಂಬಂಧಿಸಿದಂತೆ ಸ್ಪೀಕರ್ ಅನಿರ್ದಿಷ್ಟಾವಧಿವರೆಗೆ ತೀರ್ಮಾನ ಕೈಗೊಳ್ಳದೇ ಇರುವಂತೆ ಆಗಬಾರದು. ಮಣಿಪುರದ ಸದರಿ ಪ್ರಕರಣದಲ್ಲಿ ನಾಲ್ಕು ವಾರಗಳ ಒಳಗಾಗಿ ತೀರ್ಮಾನ ಕೈಗೊಳ್ಳಬೇಕು ಎಂದು ನ್ಯಾಯಪೀಠ ಆದೇಶ ನೀಡಿದೆ. ಆದರೆ, ತಾನೇ ಅವರನ್ನು ಅನರ್ಹ ಮಾಡಲು ನಿರಾಕರಿಸಿದೆ. ಮೊದಲು ಸ್ಪೀಕರ್ ಕ್ರಮ ತೆಗೆದುಕೊಳ್ಳಲಿ ಎಂದಿದೆ.